# ಸರ್ಕಾರಿ ಪ್ರೌಢಶಾಲೆ, ಕೀರ್ಗಳ್ಳಿ, ಮೈಸೂರು ತಾಲೂಕು ಮತ್ತು ಜಿಲ್ಲೆ

## ಸೇತುಬಂಧ ನೈದಾನಿಕ ಪರೀಕ್ಷೆ – 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೋತ್ತರ ಪತ್ರಿಕೆ

| ವಿದ್ಯಾರ್ಥಿಯ ಹೆಸರು: | ದಾಖಲಾತಿ ಸಂಖ್ಯೆ: |
|---|---|

**ಸಾಮರ್ಥ್ಯ –1. ಶಿಕ್ಷಕರು ಹೇಳಿದ ಪದಗಳ ಉಕ್ತಲೇಖನ ಬರೆಯುವುದು**

| | |
|---|---|
| | |
| | |
| | |
| | |
| | |

**ಸಾಮರ್ಥ್ಯ –2. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ ಇದೆ. ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ. ಕ್ರಿ. ಶ. ಸುಮಾರು 500 ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು. ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ತಲಕಾಡು ಪುಣ್ಯಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು. ಅವನ ಹೆಸರು ಚಾವುಂಡರಾಯ. ಆತ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿ. ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ರಾಯ', 'ಅಣ್ಣ', ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ. ಸ್ವತಃ ಕವಿ. 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ. ಅವನು ಕನ್ನಡಕ್ಕೆ ಕೊಟ್ಟ ಕಾಣ್ಕೆ.

**ಪ್ರಶ್ನೆಗಳು :**

(1) ತಲಕಾಡಿನ ಇತಿಹಾಸದಲ್ಲಿ ಎಂತಹ ವೀರರ ಚರಿತ್ರೆ ಇದೆ?

| |
|---|
| |
| |

(2) ಗಂಗರ ಮೊದಲ ರಾಜಧಾನಿ ಯಾವುದು?

| |
|---|
| |
| |

(3) ಜನ ಚಾವುಂಡರಾಯನನ್ನು ಏನೆಂದು ಕರೆಯುತ್ತಿದ್ದರು?

| |
|---|
| |
| |

(4) ಚಾವುಂಡರಾಯನು ಕನ್ನಡಕ್ಕೆ ಕೊಟ್ಟ ಕಾಣ್ಕೆ ಏನು?

| |
|---|
| |
| |

**ಸಾಮರ್ಥ್ಯ –3. ಕೆಳಗಿನ ಪದ್ಯಭಾಗದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ತಂದೆತಾಯಿಗಳ ಘನ । ದಿಂದ ವಂದಿಸುವಂಗೆ ।
ಬಂದ ಕುತ್ತಗಳು ಬಯಲಾಗಿ ಸ್ವರ್ಗವದು ।
ಮುಂದೆ ಬಂದಕ್ಕು ಸರ್ವಜ್ಞ

ಗುರುಗಳಿಗೆ ಹಿರಿಯರಿಗೆ । ಶಿರಬಾಗಿ ಎರಗಿದರೆ ।
ನರಸುರರು ಒಲಿದು ಸಿರಿಸುರಿದು ಕೈಲಾಸ ।
ಕರತಲಾಮಲಕ ಸರ್ವಜ್ಞ

**ಸಾಮರ್ಥ್ಯ –4.**

**ಕೊಟ್ಟಿರುವ ಪ್ರತಿ ಪ್ರಶ್ನೆಗೆ ಅಥವಾ ಅಪೂರ್ಣ ಹೇಳಿಕೆಗೂ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1. ‘ಕೃಷ್ಣನು ರಾಕ್ಷಸಿಯಾದ ಪೂತನಿಯನ್ನು ಕೊಂದನು.’ – ಈ ವಾಕ್ಯದಲ್ಲಿರುವ ಕರ್ತೃಪದ ಇದು:
   (ಎ) ಕೃಷ್ಣನು (ಬಿ) ರಾಕ್ಷಸಿಯಾದ (ಸಿ) ಪೂತನಿಯನ್ನು (ಡಿ) ಕೊಂದನು.

| **ಉತ್ತರ** | |
|---|---|

2. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದ:
   (ಎ) ಬೇರೊಬ್ಬ (ಬಿ) ಮನೆಯಲ್ಲಿ (ಸಿ) ಗುರುವನ್ನು (ಡಿ) ಮಳೆಗಾಲ

| **ಉತ್ತರ** | |
|---|---|

3. ‘ಮೂಡಣ’ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ:
   (ಎ) ವಸ್ತುವಾಚಕ (ಬಿ) ಗುಣವಾಚಕ (ಸಿ) ದಿಗ್ವಾಚಕ (ಡಿ) ಸಂಖ್ಯಾವಾಚಕ

| **ಉತ್ತರ** | |
|---|---|

4. ‘ಸುಬ್ರಹ್ಮಣ್ಯಂ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.’ – ಈ ವಾಕ್ಯವು
   (ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ (ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕವಾಕ್ಯ

| **ಉತ್ತರ** | |
|---|---|

5. ‘ಬೆಟ್ಟದಾವರೆ’ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ:
   (ಎ) ಕರ್ಮಧಾರಯ (ಬಿ) ತತ್ಪುರುಷ (ಸಿ) ದ್ವಂದ್ವ (ಡಿ) ಅಂಶಿ

| **ಉತ್ತರ** | |
|---|---|

6. ತ್ರಿಪದಿಯಲ್ಲಿರುವ ಪಾದಗಳ ಸಂಖ್ಯೆ;
   (ಎ) ಮೂರು (ಬಿ) ನಾಲ್ಕು (ಸಿ) ಐದು (ಡಿ) ಆರು

| **ಉತ್ತರ** | |
|---|---|

7. ‘ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ’ ಈ ವಾಕ್ಯದಲ್ಲಿರುವ ಅಲಂಕಾರ;
   (ಎ) ರೂಪಕ (ಬಿ) ಉಪಮಾ (ಸಿ) ದೃಷ್ಟಾಂತ (ಡಿ) ಉತ್ಪ್ರೇಕ್ಷೆ

| **ಉತ್ತರ** | |
|---|---|

8. ‘ಆನೆ’ ಪದದ ಸಮಾನಾರ್ಥಕ ಪದ ಇದು;
   (ಎ) ಅಜ (ಬಿ) ದ್ವಿಜ (ಸಿ) ಮಜ (ಡಿ) ಗಜ

| **ಉತ್ತರ** | |
|---|---|

9. ಇವುಗಳಲ್ಲಿ ತದ್ಭವ ಪದ ಇದು;
   (ಎ) ಲೋಕ (ಬಿ) ಅಮೃತ (ಸಿ) ಕಜ್ಜ (ಡಿ) ಕಸ್ತೂರಿ

| **ಉತ್ತರ** | |
|---|---|

10. ‘ಧನವಂತ’ ಪದದಲ್ಲಿರುವ ಮಹಾಪ್ರಾಣಾಕ್ಷರ ಇದು;
    (ಎ) ಧ (ಬಿ) ನ (ಸಿ) ವಂ (ಡಿ) ತ

| **ಉತ್ತರ** | |
|---|---|